# ರಾಜ್ಯ ಚುನಾವಣಾಧಿಕಾರಿಗಳು
# ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಬೆಂಗಳೂರು
**4ನೇ ಅಡ್ಡ ರಸ್ತೆ, 5ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು–560009**

**ಚುನಾವಣಾಧಿಕಾರಿಗಳ ನಡುವಳಿ**

ವಿಷಯ: ಕರಾಪ್ರಾಶಾಶಿಸಂಘದ ಚುನಾವಣೆ–2026 ರ ಘಟನಾವಳಿಗೆ ತಾತ್ಕಾಲಿಕ ತಡೆ

ಉಲ್ಲೇಖ: 1) ಪ್ರಧಾನ ಕಾರ್ಯದರ್ಶಿಗಳು, ಕರಾಪ್ರಾಶಾಶಿಸಂಘ, ಬೆಂಗಳೂರು ಇವರ ಪತ್ರ ಸಂ: ಕರಾಸಪ್ರಾಶಾಸಂ: ಚುನಾವಣೆ:2026 ದಿನಾಂಕ: 01/04/2026

2) ಚುನಾವಣಾ ಆಧಿಸೂಚನೆ ಸಂ: ಕರಾಪ್ರಾಶಾಶಿಸಂ:ಚುನಾವಣೆ:2026 ದಿನಾಂಕ: 01/04/2026

3) ಕರಾಪ್ರಾಶಾಶಿಸಂಘ, ಬೆಂಗಳೂರು ಇವರ ಪತ್ರ ಸಂ: ಚುನಾವಣೆ–2026: 384 ದಿನಾಂಕ: 18/04/2026

*****

**ಪೀಠಿಕೆ:**

ಉಲ್ಲೇಖ 1 ಪತ್ರದನುಸಾರ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ (ರಿ), ಬೆಂಗಳೂರು ನ ರಾಜ್ಯದ ಎಲ್ಲಾ ಶಾಖೆಗಳ ಎಲ್ಲಾ ಹಂತದ 2026–2031 ರ ಅವಧಿಗಾಗಿನ ಸಾರ್ವತ್ರಿಕ ಚುನಾವಣೆಗಾಗಿ ಉಲ್ಲೇಖ 2 ರಂತೆ ಚುನಾವಣಾ ಆಧಿಸೂಚನೆ ಹೊರಡಿಸಲಾಗಿತ್ತು.

ರಾಜ್ಯದ ಎಲ್ಲಾ ತಾಲೂಕು/ಯೋಜನೆ/ವಿಶೇಷ ಶಾಖೆಗಳ ಕಾರ್ಯಕಾರಿ ಸಮಿತಿ ಸದಸ್ಯರ ಆಯ್ಕೆಗಾಗಿನ ಚುನಾವಣಾ ಪ್ರಕ್ರಿಯೆಗೆ ದಿನಾಂಕ 11.04.2026 ರಿಂದ ಚಾಲನೆ ನೀಡಲಾಗಿತ್ತು. ಬೈಲಾ ನಿಯಮಾವಳಿ 16(ಡಬ್ಲ್ಯೂ) ಮತ್ತು 16(ಸಿ) ಆನ್ವಯ ಉಡುಪಿ ಜಿಲ್ಲೆಯ ಎಲ್ಲಾ ತಾಲೂಕುಗಳ ಮತದಾರರ ಯಾದಿ ಮತ್ತು ಚುನಾವಣಾಧಿಕಾರಿಗಳ ನೇಮಕಾತಿ ಅನುಕ್ರಮವಾಗಿ ಅನುಸರಣೆ ಆಗದೇ ಇದ್ದುದರಿಂದ ಈ ಜಿಲ್ಲೆಯ ಚುನಾವಣಾ ಪ್ರಕ್ರಿಯೆಗೆ ತಾತ್ಕಾಲಿಕವಾಗಿ ತಡೆ ನೀಡಿ ಸಂಘದ ಬೈಲಾ ನಿಯಮ 16(ಯು) ಅನುಸಾರ ರಾಜ್ಯದ ಚುನಾವಣಾ ಪ್ರಕ್ರಿಯೆಗೆ ಚಾಲನೆ ನೀಡಲಾಗಿತ್ತು

ಹೀಗಿರುವಾಗ ಈ ದಿನ ದಿನಾಂಕ 18.04.2026 ರಂದು ಬೆಳಿಗ್ಗೆ 11.30 ಕ್ಕೆ ಉಲ್ಲೇಖ ಪತ್ರವನ್ನು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಬೆಂಗಳೂರು ಇವರು ನೀಡುತ್ತಾ: *ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾಖಲಾಗಿರುವ ರಿಟ್ ಪೆಟಿಶನ್ ಸಂ: 12259/2026, 12253/2026, 12272/2026 ಮತ್ತು 12280/2026 ಪ್ರಕರಣದಲ್ಲಿ 01.04.2026 ರಂದು ಆಧಿಸೂಚಿಸಲಾದ ಸಂಘದ ಚುನಾವಣಾ ಘಟನಾವಳಿಗಳಿಗೆ ಮುಂದಿನ ಆದೇಶದವರೆಗೂ ತಾತ್ಕಾಲಿಕ ತಡೆಯಾಜ್ಞೆ ನೀಡಿರುವುದಾಗಿ ತಮ್ಮ ನ್ಯಾಯವಾದಿ ಸೂಚನೆ ನೀಡಿರುವುದಾಗಿ* ಪ್ರಸ್ತಾಪಿಸುತ್ತಾ ಸೂಕ್ತ ಕ್ರಮಾದೇಶವಿಡಲು ಸೂಚಿಸಿರುತ್ತಾರೆ. ಇದರೊಂದಿಗೆ ವಾಟ್ಸಪ್‌ನಲ್ಲಿ ಹರಿದಾಡುತ್ತಿರುವ ನ್ಯಾಯಾಲಯದ ಮಧ್ಯಂತರ ಆದೇಶದ ಪ್ರತಿಯನ್ನು ಸಲ್ಲಿಸಿರುತ್ತಾರೆ.

ಉಲ್ಲೇಖ 3 ರ ಸಂಘದ ಪತ್ರವನ್ನು ಪರಿಶೀಲಿಸಲಾಯಿತು. ಸಂಘದ 2026–2031 ರ ಚುನಾವಣೆಗೆ ಸಂಬಂಧಿಸಿದ 01/04/2026 ರ ಚುನಾವಣಾ ಘಟನಾವಳಿಗಳಿಗೆ ಮುಂದಿನ ಸುನಾವಣೆವರೆಗೂ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ತಾತ್ಕಾಲಿಕ ತಡೆಯಾಜ್ಞೆ ನೀಡಿ ಈ ಕೆಳಗಿನಂತೆ ಆದೇಶಿಸಿದೆ.

*"In that view of the matter, this court is of the considered opinion that an interim order is warranted. Accordingly, the calendar of events dated 01.04.2026, issued for conducting*

*the election of* respondent *No.2-Association is hereby stayed till the next date of hearing*"

ಪ್ರಯುಕ್ತ ಈ ಅದೇಶ

ಕರಾಪ್ರಾಶಾಶಿಸಂ: ಚುನಾವಣೆ:2026 ದಿನಾಂಕ: 18/04/2026

**ಆದೇಶ**

ಈ ದಿನ ದಿನಾಂಕ 18/04/2026 ರಂದು ಬೆಳಿಗ್ಗೆ 12.30 ಸಮಯದಿಂದ ಅನ್ವಯಿಸುವಂತೆ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ(ರಿ), ಗಾಂಧಿನಗರ, ಬೆಂಗಳೂರು ಸಂಘದ 2026–2031 ರ ಅವಧಿಗಾಗಿನ ಸಾರ್ವತ್ರಿಕ ಚುನಾವಣೆಗಾಗಿ ಆಧಿಸೂಚಿಸಲಾದ 01.04.2026 ರ ಉಲ್ಲೇಖ 2 ಚುನಾವಣಾ ಘಟನಾವಳಿಗಳಿಗೆ (*calendar of events*) ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೂ ತಾತ್ಕಾಲಿಕ ತಡೆಯಾಜ್ಞೆ ನೀಡಿ ಆದೇಶಿಸಲಾಗಿದೆ.

ಹಿಗಾಗಿ ತಾಲೂಕು/ವಿಶೇಷ/ಯೋಜನಾ/ಜಿಲ್ಲಾ ಶಾಖೆಗಳ ಚುನಾವಣಾಧಿಕಾರಿಗಳು ಈ ಕೆಳಗಿನಂತೆ ಕ್ರಮಾದೇಶವಿಡಲು ಆದೇಶಿಸಿದ್ದು ಏನೆಂದರೆ :

1) **ದಿನಾಂಕ 19.04.2026 ರಂದು ಜರುಗಬೇಕಿದ್ದ ತಾಲೂಕು/ವಿಶೇಷ/ಯೋಜನಾ ಶಾಖೆಗಳ ಕಾರ್ಯಕಾರಿ ಸಮಿತಿ ಸದಸ್ಯರ ಮತದಾನವನ್ನು ಮುಂದಿನ ಆದೇಶದವರೆಗೂ ಸ್ಥಗಿತಗೊಳಿಸುವುದು.**
2) ಮತಪತ್ರಗಳು ಈಗಾಗಲೇ ಮುದ್ರಣಗೊಂಡಿದ್ದರೆ ಸಂಬಂಧಿಸಿದ ಚುನಾವಣಾಧಿಕಾರಿಗಳು ಅವುಗಳನ್ನು ಮುಚ್ಚಿದ ಲಕೋಟೆಯಲಿಟ್ಟು (sealed cover) ಸೂಕ್ತ ರಕ್ಷಣೆಯೊಂದಿಗೆ ತಮ್ಮ ಸುಪರ್ದಿಯಲ್ಲಿ ಮುಂದಿನ ಆದೇಶದವರೆಗೂ ಭದ್ರವಾಗಿಟ್ಟುಕೊಳ್ಳುವುದು.
3) ಮತಪತ್ರಗಳು ಮುದ್ರಣಗೊಳ್ಳದೇ ಪ್ರೂಫ್ (Proof read stage) ಸ್ಥಿತಿಯಲ್ಲಿದ್ದರೆ ಮುದ್ರಿಸದೇ ಅದೇ ಸ್ಥಿತಿಯಲ್ಲಿ ಕಾಯ್ದಿರಿಸುವುದು.
4) ದಿನಾಂಕ 11.04.2026 ರಿಂದ 18.04.2026 ರವರೆಗಿನ ತಮ್ಮ ತಾಲೂಕಿನ ಚುನಾವಣಾ ಘಟನಾವಳಿಗಳ ಸ್ಥಿತಿವರದಿಯನ್ನು ಜಿಲ್ಲಾ ಚುನಾವಣಾಧಿಕಾರಿಗಳಿಗೆ ತಕ್ಷಣ ಸಲ್ಲಿಸಿ ಆ ಒಂದು ಪ್ರತಿಯನ್ನು ನೇರವಾಗಿ ರಾಜ್ಯ ಚುನಾವಣಾಧಿಕಾರಿಗಳ ಕಛೇರಿಗೆ ದಿನಾಂಕ 19.04.2026 ರ ಸಂಜೆ 5.30ರೊಳಗಾಗಿ ತಲುಪಿಸುವುದು
5) ಜಿಲ್ಲಾ ಚುನಾವಣಾಧಿಕಾರಿಗಳಿಗೆ ಈಗಾಗಲೇ ದಿನಾಂಕ 17.04.2026 ರವರೆಗಿನ ಚುನಾವಣಾ ಘಟನಾವಳಿಗಳ ಸ್ಥಿತಿ ವರದಿ ಸಲ್ಲಿಸಲು ಕೇಳಲಾಗಿತ್ತು. ಅದರ ಮುಂದುವರಿಕೆಯ ಭಾಗವಾಗಿ ಈಗ 18.04.2026 ರವರೆಗಿನ ತಮ್ಮ ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ಸ್ವೀಕೃತವಾಗಿರುವ ಸ್ಥಿತಿ ವರದಿ ಅವಲೋಕಿಸಿ ತಮ್ಮ ಸ್ವಂತ ಅಭಿಪ್ರಾಯದೊಂದಿಗೆ ಈ ಕಛೇರಿಗೆ ದಿನಾಂಕ 20.04.2026 ಬೆಳಿಗ್ಗೆ 11.30 ರೊಳಗಾಗಿ ವರದಿ ಸಲ್ಲಿಸುವುದು.
6) ತಾಲೂಕು/ವಿಶೇಷ/ಯೋಜನಾ/ಜಿಲ್ಲಾ ಶಾಖೆಗಳ ಚುನಾವಣಾಧಿಕಾರಿಗಳು ದಿನಾಂಕ 22/04/2026 ರಂದು ಸಂಜೆ 6.00 ಕ್ಕೆ ಆಧಿಸೂಚಿಸಿ ತಮ್ಮ ಶಾಖೆಗಳ ಪದಾಧಿಕಾರಿಗಳ ಚುನಾವಣಾ ಪ್ರಕ್ರಿಯೆಗೆ ಚಾಲನೆ ನೀಡಬೇಕಿದ್ದ ಚುನಾವಣಾ ಘಟನಾವಳಿಗಳನ್ನು ತಾತ್ಕಲಿಕವಾಗಿ ಸ್ಥಗಿತಗೊಳಿಸಿ ಮುಂದಿನ ಆದೇಶದವರೆಗೆ ಆಧಿಸೂಚಿಸದೇ ತಡೆಹಿಡಿಯುವುದು.
7) ತಾಲೂಕು ಕಾರ್ಯಕಾರಿ ಸಮಿತಿ ಸದಸ್ಯರ ಅವಿರೋಧ ಆಯ್ಕೆ ಆಗಿ ರಾಜ್ಯ ಚುನಾವಣಾಧಿಕಾರಿಯಿಂದ ಚುನಾವಣಾ ಫಲಿತಾಂಶ ಘೋಷಿಸಲು

ಅನುಮೋದಿಸಲ್ಪಟ್ಟ ಶಾಖೆಗಳ ಚುನಾವಣಾಧಿಕಾರಿಗಳು ತಮ್ಮ ಜಿಲ್ಲಾ ಚುನಾವಣಾಧಿಕಾರಿಗಳೊಂದಿಗೆ ಸಮನ್ವಯತೆ ಸಾಧಿಸಿ ಆ ಶಾಖೆಗಳ ಪದಾಧಿಕಾರಿಗಳ ಚುನಾವಣಾ ಪ್ರಕ್ರಿಯೆಗಾಗಿ ಅರ್ಹ ಮತದಾರರ ಯಾದಿ ತಯಾರಿಸಿ ದಿನಾಂಕ 20.04.2026 ರ ಬೆಳಿಗ್ಗೆ 11.30 ರೊಳಗಾಗಿ ಈ ಕಛೇರಿಗೆ ರವಾನಿಸುವುದು.

8) ಯಾವ ಯಾವ ಶಾಖೆಗಳ ಅವಿರೋಧ ಆಯ್ಕೆಗಳ ಫಲಿತಾಂಶಕ್ಕೆ ರಾಜ್ಯ ಚುನಾವಣಾಧಿಕಾರಿ ಅನುಮೋದನೆ ನೀಡಲಾಗಿಲ್ಲವೋ ಅಂಥಹ ಶಾಖೆಗಳ ಪ್ರಸ್ತಾವನೆಗಳಿಗೆ ಅನ್ವಯಿಸುವಂತೆ ತಾತ್ಕಾಲಿಕ ತಡೆ ನೀಡಿದ್ದು ಫಲಿತಾಂಶ ಪ್ರಕಟಣೆಯನ್ನು ಮುಂದಿನ ಆದೇಶದವರೆಗೂ ತಡೆ ಹಿಡಿಯಲಾಗಿದೆ.

(ಮೆಹಬೂಬ್ ಪಾಷ ಮೂಲಿಮನಿ)

ಬೆಂಗಳೂರು
18ನೇ ಏಪ್ರಿಲ್ 2026

**ರಾಜ್ಯ ಚುನಾವಣಾಧಿಕಾರಿಗಳು**
ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ
4ನೇ ಅಡ್ಡ ರಸ್ತೆ, 5ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು–560 009

ಪ್ರತಿಯನ್ನು:

1) ರಾಜ್ಯದ ಎಲ್ಲಾ ತಾಲೂಕು/ಯೋಜನೆ/ವಿಶೇಷ/ಜಿಲ್ಲಾ ಚುನಾವಣಾಧಿಕಾರಿಗಳಿಗೆ
2) ಸಂಘಗಳ ಜಿಲ್ಲಾ ನೊಂದಣಾಧಿಕಾರಿಗಳು ಹಾಗು ಸಹಕಾರ ಸಂಘಗಳ ಉಪ ನಿಬಂಧಕರು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ, ಸಹಕಾರ ಸೌಧ, ಮಲ್ಲೇಶ್ವರಂ, ಬೆಂಗಳೂರು
3) ಅಧ್ಯಕ್ಷರು/ಪ್ರಧಾನ ಕಾರ್ಯದರ್ಶಿಗಳು, ಕರಾಪ್ರಾಶಾಶಿಸಂಘ, ಬೆಂಗಳೂರು
4) ಚುನಾವಣಾ ಕಛೇರಿ ಕಡತಕ್ಕೆ